ವಿಜಯ ಕರ್ನಾಟಕ 17-6-2012

# ಅಸಂಪ್ರದಾಯಿಕ ಇಂಧನ: ಶೇ.28 ವಿದ್ಯುತ್ ಉತ್ಪಾದನೆ

■ ವಿಕ ಸುದ್ದಿಲೋಕ ಶಿವಮೊಗ್ಗ

ರಾಜ್ಯದಲ್ಲಿ ಎಲ್ಲ ಮೂಲಗಳಿಂದ 13400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಇದರಲ್ಲಿ ಶೇ.28ರಷ್ಟು ಅಸಂಪ್ರದಾಯಿಕ ಇಂಧನ ಮೂಲಗಳಿಂದ ಬರುತ್ತಿದೆ ಎಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕ್ರೆಡಿಲ್) ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೇ.28ರಷ್ಟು ಇಂಧನ ಮೂಲದಲ್ಲಿ ಪವನ, ಕಿರು ಜಲ ವಿದ್ಯುತ್, ಬಯೋಮಾಸ್ ಹಾಗೂ ಸೋಲಾರ್ ಮೂಲಗಳಿಂದ 3750ಮೆಗಾವ್ಯಾಟ್ ವಿದ್ಯುತ್ ಲಭಿಸುತ್ತಿದೆ. ಇದರಲ್ಲಿ ಶೇ.80ರಷ್ಟನ್ನು ಸೋಲಾರ್ ಮೂಲಕ ಪೂರೈಸುತ್ತಿದೆ ಎಂದರು.

ಇತ್ತೀಚೆಗೆ ನಡೆದ ಜಿಮ್‌ನಲ್ಲಿ ರಾಜ್ಯಕ್ಕೆ ಬಂದಿರುವ ಹೂಡಿಕೆಯಲ್ಲಿ ಅಸಂಪ್ರದಾಯಿಕ ಇಂಧನ ಕ್ಷೇತ್ರಕ್ಕೆ ಹೆಚ್ಚಿನ ಹಣ ಹರಿದು ಬಂದಿದೆ. ನಗರದ ಎಲ್.ಕೆ.ಶ್ರೀಪತಿ ಅವರು ತಮ್ಮ ನಿವಾಸವನ್ನು ಪರಿಸರ ಸ್ನೇಹಿ ಮನೆಯನ್ನಾಗಿ ರೂಪಿಸಿರುವುದು ಮೆಚ್ಚುವಂಥದ್ದು. ಪ್ರತಿ ಮನೆಗೆ ಪ್ರತಿದಿನ 1.6 ಕಿಲೋ ವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಅದ್ದರಿಂದ ಯಾರಾದರೂ ನವೀಕರಿಸಬಹುದಾದ ಇಂಧನ ವ್ಯವಸ್ಥೆ ಅಳವಡಿಸಿಕೊಂಡರೆ ರಾಜ್ಯಸರಕಾರ ಇವರಿಗೆ ಶೇ.20ರಷ್ಟು ಸಬ್ಸಿಡಿ ನೀಡುವ ಯೋಜನೆ ರೂಪಿಸಿದೆ. ಇದು ಈಗಾಗಲೇ ನೀಡುತ್ತಿರುವ ಶೇ.30 ರಷ್ಟು ಸಬ್ಸಿಡಿಯಿಂದ ಹೊರತಾಗಿದೆ ಎಂದರು.

ಗೃಹಾಧಾರಿತ ಸೋಲಾರ್ ಇಂಧನ ಬಳಕೆ ಹೆಚ್ಚಿಸಲು ಕ್ರೆಡಿಲ್ ಗುರಿ ಹೊಂದಿದೆ. ಪವನ, ಕಿರು ಜಲ, ಬಯೋಮಾಸ್, ಸೋಲಾರ್, ತ್ಯಾಜ್ಯಾಧಾರಿತ ವಿದ್ಯುತ್ ಉತ್ಪಾದನೆಯನ್ನು ಖಾಸಗಿ ಹೂಡಿಕೆ ಮೂಲಕ ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಅದೇ ರೀತಿ ಸೋಲಾರ್ ಕಂಪನಿಗಳು ಸಹ ತಾವು ಅಳವಡಿಸುವ ಘಟಕಗಳ ನಿರ್ವಹಣೆ ಹಾಗೂ ಮಾರಾಟ ನಂತರದ ಸೇವೆಯನ್ನು ಉತ್ತಮಪಡಿಸಿಕೊಂಡರೆ ಜನರು ಇದಕ್ಕೆ ಸ್ಪಂದಿಸುತ್ತಾರೆ ಎಂದರು.

ಇದೇ ಸಂದರ್ಭ ಮಾತನಾಡಿದ ಸೆಲ್ಕೋ ಸೋಲಾರ್ ಸಂಸ್ಥಾಪಕ ಹಾಗೂ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಹರೀಶ್ ಹಂದೆ, ಸಾರ್ವಜನಿಕರು ತಮ್ಮ ಮನೆಗಳಿಗೆ ಸೋಲಾರ್ ಇಂಧನ ವ್ಯವಸ್ಥೆ ಅಳವಡಿಸಿಕೊಳ್ಳಲು ರಾಜ್ಯದಲ್ಲಿ ಬ್ಯಾಂಕ್‌ಗಳು ಸಾಕಷ್ಟು ನೆರವು ನೀಡುತ್ತಿವೆ. ಇದರಿಂದ 3.50ಲಕ್ಷ ಮನೆಗಳಿಗೆ ಸೋಲಾರ್ ಆಧಾರಿತ ವಿದ್ಯುತ್ ವ್ಯವಸ್ಥೆ ಅಳವಡಿಸಲು ಸಾಧ್ಯವಾಗಿದೆ. 2012 ವರ್ಷವನ್ನು ಇಂಧನ ಎಲ್ಲರಿಗಾಗಿ ಎಂದು ವಿಶ್ವಸಂಸ್ಥೆ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಜನರೂ ಈ ಬಗ್ಗೆ ಆಲೋಚನೆ ಮಾಡಬೇಕು. ಸೋಲಾರ್ ಸಾಧನ ತಯಾರಿಕಾ ಕಂಪನಿಗಳು ಪ್ರಾಮಾಣಿಕ ಸೇವೆ ನೀಡಬೇಕೆಂದರು.

ಎಲ್.ಕೆ.ಶ್ರೀಪತಿ ಮಾತನಾಡಿ, ತಮ್ಮ ಮನೆಯನ್ನು ಪರಿಸರ ಸ್ನೇಹಿ ನಿವಾಸ ಮಾಡಲು 1.25ಲಕ್ಷ ರೂ. ಖರ್ಚಾಗಿದೆ. ಭಾರತೀಯ ವಿಕಾಸ ಟ್ರಸ್ಟ್ ಆಡಳಿತ ಟ್ರಸ್ಟಿ ಕೆ.ಎಂ.ಉಡುಪ, ಮ್ಯಾಕ್ಸ್‌ಸ್ ಉಪಾಧ್ಯಕ್ಷ ನರಸಿಂಹನಾಯಕ್, ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಕುಮಾರ ಸ್ವಾಮಿ, ಡಾ.ಪಿ. ನಾರಾಯಣ ಹಾಗೂ ಇತರರು ಗೋಷ್ಠಿಯಲ್ಲಿದ್ದರು.



ಶಿವಮೊಗ್ಗದ ಲಾಲ್‌ಬಹದ್ದೂರ್‌ಶಾಸ್ತ್ರಿ ನಗರದಲ್ಲಿ ಪ್ರೊ.ಎಲ್.ಕೆ.ಶ್ರೀಪತಿ ಅವರ ನಿವಾಸದಲ್ಲಿ ಅಳವಡಿಸಿರುವ ನವೀಕರಿಸಬಹುದಾದ ಇಂಧನ ವ್ಯವಸ್ಥೆಯನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕ್ರೆಡಿಲ್) ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಕುಮಾರ್ ಶನಿವಾರ ಉದ್ಘಾಟಿಸಿದರು. ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಡಾ.ಹರೀಶ್ ಹಂದೆ ಮತ್ತಿತರರು ಇದ್ದರು.



ಶಿವಮೊಗ್ಗದ ಕೈಗಾರಿಕೋದ್ಯಮಿ ಎಸ್.ರುದ್ರೇಗೌಡ ಅವರಿಗೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ವತಿಯಿಂದ 'ಕರ್ನಾಟಕ ಕೈಗಾರಿಕಾ ರತ್ನ' ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ಇತ್ತೀಚೆಗೆ ನೀಡಲಾಯಿತು. ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಸಚಿವ ರಾಜೂಗೌಡ, ವಿಧಾನ ಪರಿಷತ್‌ಸದಸ್ಯ ಎಂ.ವಿ.ರಾಜಶೇಖರನ್ ಮತ್ತಿತರರು ಹಾಜರಿದ್ದರು.